ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್.ನಂಃ **92/2011**

ಚಾಸಾ-**6** ಪ್ರಾಸಾ **-3** ದಿನಾಂಕ **24.10.2019**
ಪ್ರಮಾಣವಚನ ಬೋದಿಸಲಾಯಿತು.

| | | |
|---|---|---|
| ಹೆಸರು | : | ಕೃಷ್ಣಮೂರ್ತಿ |
| ತಂದೆಯ ಹೆಸರು | : | ರಾಜಶೇಖರಯ್ಯ |
| ವಯಸ್ಸು | : | **57** ವರ್ಷ |
| ಉದ್ಯೋಗ | : | **Executive Engineer** |
| ವಾಸ | : | ಬೆಂಗಳೂರು |

ಮುಖ್ಯ ವಿಚಾರಣೆಃ ಸರ್ಕಾರದ ಪರ ಸ್ಪೆಷಲ್ ಪಿಪಿ ರವರಿಂದಃ

ನಾನು 2013 ರಿಂದ 2016 ರವರೆಗೆ ಹಾಸನದ ಲೋಕೋಪಯೋಗಿ ವಿಭಾಗ, ಹಾಸನದಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಕೆಲಸ ಮಾಡಿದ್ದೇನೆ.

2. ದಿನಾಂಕ 03.08.2013 ರಂದು ಹಾಸನದ ಲೋಕಾಯುಕ್ತ ಕಚೇರಿಯಿಂದ ಸಿ.ಆರ್. ಮಂಜುನಾಥರವರ ಎರಡು ಕಟ್ಟಡಗಳ ಮೌಲ್ಯದ ಪಟ್ಟಿಯನ್ನು ತಯಾರಿಸಿಕೊಡುವಂತೆ ಪತ್ರದ ಮೂಲಕ ಕೋರಿದ್ದರು. ದಿನಾಂಕ 16.11.2013 ರಂದು ಸದರಿ ಮಂಜುನಾಥರವರಿಗೆ ಸೇರಿದ ನಿರ್ಮಾಣ ಹಂತದಲ್ಲಿರುವ ಕಟ್ಟಡ ಸಂಖ್ಯೆಃ ಎಂಐಜಿ 1442, ಕೆ.ಹೆಚ್.ಬಿ ಕಾಲೋನಿ, ಹೊಸ ಬಸ್ಸು ನಿಲ್ದಾಣದ ಎದುರಲ್ಲಿರುವ ಕಟ್ಟಡಕ್ಕೆ ಭೇಟಿ ನೀಡಿ ಸದರಿ ಕಟ್ಟಡವನ್ನು ಪರಿಶೀಲಿಸಿದ್ದೇನೆ. ಸದರಿ ಕಟ್ಟಡ ವಾಸಕ್ಕಾಗಿ ನಿರ್ಮಿಸುತ್ತಿರುವ ಕಟ್ಟಡವಾಗಿತ್ತು. ಸದರಿ ಕಟ್ಟಡದಲ್ಲಿ ಒಳಗೊಂಡಿರುವ ಪ್ರತಿಯೊಂದು ಅಂಶಗಳನ್ನು ಪರಿಗಣಿಸಿ 2013-14 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ಅಂದಾಜು ಮೌಲ್ಯವನ್ನು ನಿರ್ಧರಿಸಿದ್ದೇನೆ. ಸದರಿ ಕಟ್ಟಡವು ನಿರ್ಮಾಣ ಹಂತದಲ್ಲಿದ್ದು ನಾನು ಪರಿಶೀಲಿಸಿದ ದಿನಾಂಕಕ್ಕೆ ಒಟ್ಟು ಮೌಲ್ಯ 46,04,709/- ಆಗಿತ್ತು.

3. ಅದೇ ದಿನ ಸದರಿ ಮಂಜುನಾಥರವರಿಗೆ ಸೇರಿದ ಹಾಸನದ ಕುವೆಂಪು ನಗರದಲ್ಲಿರುವ ಎಲ್.ಐ.ಜಿ ಕಟ್ಟಡ ಸಂಖ್ಯೆ-214, ಗೆ ಭೇಟಿ ನೀಡಿ ಸದರಿ ಕಟ್ಟಡವನ್ನು ಪರಿಶೀಲಿಸಿದ್ದೇನೆ. ಸದರಿ ಕಟ್ಟಡ ಮೂವತ್ತು ವರ್ಷದ ಹಳೆಯ ಕಟ್ಟಡವಾಗಿದ್ದು ಅದು ವಾಸದ ಮನೆಯಾಗಿರುತ್ತದೆ. ಅದರಲ್ಲಿ ಗ್ರೌಂಡ್ ಫ್ಲೋರ್ ಮಾತ್ರ ಇದೆ. ಸದರಿ ಕಟ್ಟಡಕ್ಕೆ ಸಬ್ ರಿಜಿಸ್ಟ್ರಾರ್ ಕಚೇರಿಯ ದರದಂತೆ ಮೂವತ್ತು ವರ್ಷಗಳ ಸವಕಳಿ ಕಳೆದ ನಂತರ ಒಟ್ಟು ಮೌಲ್ಯ 1,80,113/- ರೂ ಆಗುತ್ತದೆ.

4. ಸದರಿ ಎರಡೂ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಒಂದು ಸಂಪೂರ್ಣ ವರದಿಯನ್ನು ಹಾಸನದ ಲೋಕಾಯುಕ್ತ ಕಚೇರಿಗೆ ಸಲ್ಲಿಸಿದ್ದೇನೆ. ಈಗ ಸದರಿ ವರದಿಯನ್ನು ನೋಡಿದೆನು. ಸದರಿ ವರದಿಯು ಪೆನ್ಸಿಲ್ ನಲ್ಲಿ ಗುರುತಿಸಿರುವ ಪುಟಸಂಖ್ಯೆ4 ರಿಂದ 29 ಮತ್ತು 32, 33 ರವರೆಗೆ ಇದೆ. ಸದರಿ ವರದಿಯನ್ನು ನಿಪಿ-65 ಎಂದು ಗುರುತಿಸಲಾಯಿತು. ಸದರಿ ವರದಿಯಲ್ಲಿರುವ ಸಹಿಗಳನ್ನು ನೋಡಿದೆ. ಅವು ನನ್ನ ಸಹಿಗಳು. ಕೊನೆಯ ಪುಟ(ಪುಟಸಂಖ್ಯೆ33) ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-65(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ

(ಆರೋಪಿಪರ ಶ್ರೀ ಸಿ.ಎನ್.ವಿ ವಕೀಲರು ಹಾಜರಿದ್ದು, ಸಮಯ ಕೋರಿದ್ದಾರೆ, ಪಾಟೀ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು) *ಓ.ಹೇ.ಕೇ.ಸ.ಇದೆ.*

*ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ*
*ಸ್ಪೆಷಲ್ ನ್ಯಾಯಾಧೀಶರು, ಹಾಸನ.*